# ತಾಜಾ ಶಾರೀರ, ಹೊಸಬರ ಸ್ವರ

■ ವಿಶಾಖ ಎನ್.

ಕಬೀರ್ ಕಾಥ್‌ಪಲಿಯಾ, ಸವೇರಾ, ಲೊಥಿಕಾ– ಈ ಮೂರೂ ಹೆಸರುಗಳು ಸದ್ಯ ಹಿಂದಿ ಚಿತ್ರಸಂಗೀತ ಕ್ಷೇತ್ರದಲ್ಲಿ ಒಂದು ಮಟ್ಟಕ್ಕೆ ತೇಲಾಡುತ್ತಿವೆ. 'ಗೆಹೆರಾಯಿಯಾಂ' ಸಿನಿಮಾದ ಎರಡು ಗೀತೆಗಳಲ್ಲಿನ ಪಾಶ್ಚಿಮಾತ್ಯ ಪಲುಕುಗಳ ಹದವರಿತ ಸ್ವರ ಸಂಯೋಜನೆಯೇ ಇದಕ್ಕೆ ಕಾರಣ.


ಕಬೀರ್

'ಒಎಫ್‌ಎಫ್' ಎಂಬ ಅಡ್ಡಹೆಸರಿನಲ್ಲಿ (ಓಫ್ ಎಂದರೆ ಮೂರ್ಖತನ ಎಂಬ ಅರ್ಥವೂ ಇದೆಯಂತೆ) ಕಬೀರ್–ಸವೇರಾ ಒಂದು ಯೂಟ್ಯೂಬ್ ಚಾನೆಲ್ ಪ್ರಾರಂಭಿಸಿದರು. ಅಲ್ಲಿಯೇ ತಮ್ಮ ಸ್ವಂತ ಸಂಯೋಜನೆಯ ಹಾಡುಗಳನ್ನು ಪೋಸ್ಟ್ ಮಾಡ ತೊಡಗಿದ್ದರು. ಹಾಗೆ ನೋಡಿದರೆ, ಇವರು ಜನಪ್ರಿಯ ಯೂಟ್ಯೂಬರ್‌ಗಳೇನೂ ಅಲ್ಲ. ತಮ್ಮ ಪಾಡಿಗೆ ತಾವು ಕೆಲವು ಜಾಹೀರಾತುಗಳಿಗೆ ಸಂಗೀತ ನೀಡುವ ಕೆಲಸವನ್ನು ಮಾಡಿಕೊಂಡು ಇದ್ದವರು. ಬೇರೆ ಹೆಸರಿನಲ್ಲಿ ಸ್ವಂತ ಸಂಗೀತ ಮಾಡಿ, ಪ್ರತಿಕ್ರಿಯೆ ಹೇಗೆ ಬಂದೀತು ಎಂದು ಮಾಡಿದ ಪ್ರಯೋಗ ಇದು.


ಲೋಥಿಕಾ ಝಾ

'ಫ್ರಂಟ್‌ಲೈನ್' ಎಂಬ ಒಂದು ಗೀತೆಯನ್ನು ಮೂರು ವರ್ಷಗಳ ಹಿಂದೆ ಸಿದ್ಧಪಡಿಸಿ, ಯೂಟ್ಯೂಬ್‌ಗೆ ಹಾಕಿದರು. ಆ ಇಂಗ್ಲಿಷ್ ಗೀತೆಯಲ್ಲಿ ಇದ್ದುದು ಲೊಥಿಕಾ ಕಂಠ. ಅದೇ ಸಂಯೋಜನೆಯೇ ಈಗ 'ಗೆಹೆರಾಯಿಯಾಂ' ಸಿನಿಮಾದ ಶೀರ್ಷಿಕೆ ಗೀತೆಯಾಗಿ ಹಿಂದಿಗೆ ಬಂದಿದೆ. ಎರಡು ದಿನಗಳಲ್ಲಿ ಒಂದೂವರೆ ಕೋಟಿ ಜನ ಯೂಟ್ಯೂಬ್‌ನಲ್ಲಿ ಈ ಹಾಡನ್ನು ವೀಕ್ಷಿಸಿದ್ದರು. 'ಡೂಬೆ' ಎಂಬ ಇನ್ನೊಂದು ಹಾಡೂ ಸಾಕಷ್ಟು ಜನಪ್ರಿಯವಾಗಿದೆ.

ನಿರ್ದೇಶಕ ಶಕುನ್ ಭಾಟಿಯಾ ಸ್ನೇಹಿತರೊಬ್ಬರು ಈ ಪ್ರತಿಭಾವಂತ ಸ್ವರ ಸಂಯೋಜಕರ ಬಗೆಗೆ ಹೇಳಿದ್ದರು. ಒಂದು ಸಂದೇಶ ಕಳುಹಿಸಿ, ಭೇಟಿಗೆ ಕರೆದರು ಶಕುನ್. ಅವರ ನಿರ್ದೇಶನದ 'ಕಪೂರ್ ಅಂಡ್ ಸನ್ಸ್' ಹಿಂದಿ ಚಿತ್ರ ನೋಡಿದ್ದ ಕಬೀರ್–ಸವೇರಾಗೆ ಖುಷಿ. ಮೊದಲು ಒಂದು ಹಾಡಿಗೆ ಸ್ವರ ಸಂಯೋಜನೆ ಮಾಡುವಂತೆ ಶಕುನ್ ಕೇಳಿದರು. ಅದನ್ನು ಕೇಳಿದ ಮೇಲೆ ಎಲ್ಲ ಹಾಡುಗಳಿಗೂ ಅವಕಾಶ ಕೊಟ್ಟುಬಿಟ್ಟರು.

ಇಂತಹ ಹೊಸ ಪ್ರತಿಭೆಗಳನ್ನು ಚಿತ್ರದ ನಾಯಕಿ ದೀಪಿಕಾ ಪಡುಕೋಣೆ ಕೂಡ ಕೊಂಡಾಡುತ್ತಿದ್ದಾರೆ. ಲೊಥಿಕಾ ಅವರ ತಾಜಾ ಶಾರೀರ ಕೇಳಿ ಸಹೃದಯರಂತೂ ಮುದಗೊಳ್ಳುತ್ತಿದ್ದಾರೆ. ■

# ಊ ಅಂಟಾವಾ...

ಎಲ್ಲಿ ನೋಡಿದರೂ 'ಊ ಅಂಟಾವಾ' ತೆಲುಗು ಹಾಡಿನ ಗುಂಗು. 'ಪುಷ್ಪಾ' ಚಿತ್ರದ ಯಶಸ್ಸಿನಲ್ಲಿ ದೊಡ್ಡ ಹವಿಸ್ಸು ಈ ಹಾಡಿನದ್ದು. ಅನೇಕರು ಹಾಡಿನ ಸಾಲುಗಳನ್ನು ಮತ್ತೆ ಮತ್ತೆ ಗುನುಗುತ್ತಿದ್ದಾರೆ. ಕುಣಿತವನ್ನು ಅನುಕರಿಸಿ 'ರೀಲ್ಸ್' ಮಾಡುತ್ತಿದ್ದಾರೆ. ಸಮಂತಾ ಇದೊಂದು ಹಾಡಿಗೆ ಹೆಜ್ಜೆ ಹಾಕಿ ಹೋದದ್ದೇ ಚಿತ್ರತಂಡಕ್ಕೆ ವರದಾನವಾದದ್ದೂ ನಿಜ. ಈ ಹಾಡು ಚಿತ್ರ ಬಿಡುಗಡೆಯಾಗಲು ದಿನ ನಿಗದಿಯಾಗಿದ್ದ ಹದಿನೈದು ದಿನಗಳ ಮುಂಚೆಯಷ್ಟೆ ಚಿತ್ರಿತವಾಯಿತೆನ್ನುವುದು ಗಮನಾರ್ಹ.

ಗಣೇಶ್ ಆಚಾರ್ಯ ಅವರಿಗೆ ಡಿಸೆಂಬರ್ 2, 2021ರಂದು ಅಲ್ಲು ಅರ್ಜುನ್ ಫೋನ್ ಕರೆ ಮಾಡಿ, 'ಒಂದು ಹಾಡಿಗೆ ಕೊರಿಯೊಗ್ರಾಫ್ ಮಾಡಬೇಕಿದೆ' ಎಂದು ಕರೆದರು. ಮರುದಿನ ಕ್ಯಾಟರ್ಯಾಕ್ಟ್ ಶಸ್ತ್ರಚಿಕಿತ್ಸೆಗೆ ವೈದ್ಯರು ದಿನ ಗೊತ್ತುಪಡಿಸಿದ್ದರು. ಹೀಗಾಗಿ 'ಸದ್ಯಕ್ಕೆ ಸಾಧ್ಯವಿಲ್ಲ' ಎಂದು ಗಣೇಶ್ ಉತ್ತರಿಸಿದರು. ಅಲ್ಲು ಅರ್ಜುನ್ ಅಷ್ಟಕ್ಕೇ ಸುಮ್ಮನಾಗದೇ ನಿರ್ದೇಶಕರಿಗೆ ತಿಳಿಹೇಳಿ, ವೈದ್ಯರಿಗೇ ಕರೆಮಾಡಿ, ಶಸ್ತ್ರಚಿಕಿತ್ಸೆಯನ್ನೇ ಮುಂದೂಡಿಸಿದರು. ಗಣೇಶ್ ಬಂದವರೇ ಎರಡು ದಿನ ರಿಹರ್ಸಲ್ ಮಾಡಿಸಿ, ಸಮಂತಾಗೆ ಸ್ಟೆಪ್‌ಗಳನ್ನು ಹೇಳಿಕೊಟ್ಟರು.

ಡಿಸೆಂಬರ್ 17ಕ್ಕೆ ಚಿತ್ರ ತೆರೆಕಂಡಿತು. ಬಿಡುಗಡೆಯಾಗುವ ಮೊದಲ ಕೆಲವು ದಿನಗಳಲ್ಲೇ 'ಊ ಅಂಟಾವಾ' ಹಾಡನ್ನು ಎಲ್ಲೆಡೆ ಪ್ರಚಾರಕ್ಕೆ ಬಳಸಿದರು. ಅದು ಚಿತ್ರತಂಡಕ್ಕೆ ದೊಡ್ಡ ಫಲವನ್ನೇ ನೀಡಿತು.

'ಹಾಡಿನಲ್ಲಿ ನರ್ತಿಸುವವರು ಸೆಕ್ಸಿಯಾಗಿ ಕಾಣಬೇಕೆಂದರೆ ಬಟ್ಟೆ ಕಡಿಮೆ ಹಾಕಬೇಕು ಎಂದೇನೂ ಇಲ್ಲ. ಸೀರೆಯನ್ನು ಮೊಣಕಾಲಿನವರೆಗೆ ತುಸು ಎತ್ತಿ, ಕೆಳಕ್ಕೆ ಬಿಟ್ಟರೂ ಮುಖಭಾವ ಚೆನ್ನಾಗಿದ್ದರೆ ಭಾವಸೂಕ್ಷ್ಮವು ರಸಿಕರಿಗೆ ದಾಟುತ್ತದೆ. ಊ ಅಂಟಾವಾ ಹಾಡಿನಲ್ಲಿ ಆದದ್ದು ಅದೇ. ಮೊದಲ ಬಾರಿಗೆ ಸಮಂತಾ ಅವರಿಗೆ ಕೊರಿಯೊಗ್ರಾಫ್ ಮಾಡಿದೆ. ನನ್ನ ಶಸ್ತ್ರಚಿಕಿತ್ಸೆ ಮುಂದೂಡಿದ್ದಕ್ಕೂ ಹಾಡು ಇಷ್ಟು ದೊಡ್ಡ ಹಿಟ್ ಆದದ್ದಕ್ಕೆ ಖುಷಿ ಇದೆ' ಎಂದು ಗಣೇಶ್ ಪ್ರತಿಕ್ರಿಯಿಸಿದ್ದಾರೆ. ■

